ಬಂತು. ಸ್ವಲ್ಪ ಒರಟನಾದರೂ ತನ್ನ ಭಕ್ತ ಈತ! ಯಾವ ಕಾಲಕ್ಕೂ ಭಕ್ತರಿಗೆ ಸಂಕಟ ಕೊಡಬಾರದು... ರಸ್ತೆ ಬಿಟ್ಟು ಪುನಃ ಫುಟ್‌ಪಾತ್ ಏರಿದ ವಿಷ್ಣು.

ಮುಂದಕ್ಕೆ ರಸ್ತೆಯುದ್ದಕ್ಕೂ ರಸ್ತೆಗೆ ಮುಖ, ಚರಂಡಿಗೆ ತಿಕ ಹಾಕಿ ಗಂಡಸರು, ಹೆಂಗಸರು, ಮಕ್ಕಳು ಎನ್ನುವ ಭೇದವಿಲ್ಲದೆ ಕುಕ್ಕುರುಗಾಲಲ್ಲಿ ಕುಳಿತ ಮಂದಿ. ನಿನ್ನೆ ಜಾತ್ರೆ ಸಮಯದಲ್ಲೂ ಊಟಕ್ಕೆ ಹೀಗೆಯೇ ಜನರು ಉದ್ದಕ್ಕೆ ಸಾಲು ಹಿಡಿದು ಕೂತಿದ್ದರು. ವ್ಯತ್ಯಾಸ ಎಂದರೆ ನಿನ್ನೆ ಮಂಡಿ ಹಾಕಿ ಕೂತಿದ್ದರು, ಇವತ್ತು ಕುಕ್ಕುರುಗಾಲಲ್ಲಿ ಕೂತಿದ್ದಾರೆ! ನಿನ್ನೆ ಎದುರಿಗೆ ಊಟದ ಎಲೆಯಿತ್ತು, ಇವತ್ತು ನೀರಿನ ತಂಬಿಗೆಯಿದೆ! ಹೀಗೆ ರಸ್ತೆ ರಸ್ತೆ, ಗಲ್ಲಿ ಗಲ್ಲಿಗಳಲ್ಲಿಯೂ ರಸ್ತೆಯನ್ನೇ ಮನೆ ಮಾಡಿಕೊಂಡಿದ್ದ ಭಕ್ತರೇ ಎದುರಾಗುತ್ತಾ ಹೋದರು. ಕೆಲವೆಡೆ ಮೂಗು ಮುಚ್ಚಿಕೊಂಡ. ಕೆಲವೆಡೆ ಕಣ್ಣು, ಕೆಲವೆಡೆ ಕಿವಿ ಹೀಗೆ ಒಂದೊಂದೇ ಅಂಗಾಂಗಗಳನ್ನು ಮುಚ್ಚಿಕೊಳ್ಳಬೇಕಾಗಿಯೂ ಬಂತು. ವಿಷ್ಣು ಯೋಚಿಸಿದ... ಭೂಲೋಕದ ಬಹುತೇಕ ಜನರಿಗೆ ದಿನವೂ ಹೊಟ್ಟೆಗೇನು ಎನ್ನುವ ಚಿಂತೆ. ತಿಂದುಂಡ ಮೇಲೆ ಮರುದಿನ ಬಹಿರ್ದೆಸೆಗೆ ಹೋಗಲು ಇನ್ನಿಲ್ಲದ ಪರದಾಟ... ಕೊನೆಗೊಮ್ಮೆ ತಡೆದು ಕೂರಲು ಅಸಾಧ್ಯವಾದಾಗ ಸಿಕ್ಕಿದ್ದೇ ಪ್ರಶಸ್ತ ಜಾಗ! ತಪ್ಪು ಸೃಷ್ಟಿಕರ್ತ ಬ್ರಹ್ಮದೇವನದ್ದೇ. ಉಂಡದ್ದು ಪೂರ್ಣವಾಗಿ ಜೀರ್ಣವಾಗಿ ಹೋಗುವಂತೆ, ಮರುದಿನ ಬಹಿರ್ದೆಸೆಗೆ ಹೋಗಬೇಕಾದ

